KACM030026582022

C.C.1713/2022 P.W-1

**ದಿನಾಂಕ :13.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು : ಆರೋಪಿ ಪರ ಶ್ರೀ ಎ ಕೆ ಆರ್ ವಕೀಲರಿಂದ :**

ನಾನು ಏನು ಕೆಲಸ ಮಾಡುತ್ತೇನೆ, ಎಲ್ಲಿ ವಾಸ ಮಾಡುತ್ತೇನೆ ಮತ್ತು ನನ್ನ ಬಗ್ಗೆ ಖುದ್ದು ಮಾಹಿತಿ ಆರೋಪಿಗೆ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಮನೆ ಮತ್ತು ಆರೋಪಿ ಏನು ಕೆಲಸ ಮತ್ತು ಎಲ್ಲಿ ಕೆಲಸ ಮಾಡುತ್ತಾರೆ ಎಂಬ ಬಗ್ಗೆ ಮಾಹಿತಿ ಇರುತ್ತದೆ. ಆರೋಪಿಯ ವಿಳಾಸ ಗಾಂಧಿ ಚೌಕ, ಶಿವಾಜಿ ನಗರ, ಧಾರವಾಡ. ಆರೋಪಿ ಹಾಗೂ ಆಕೆಯ ಗಂಡ ಚಿಕ್ಕಮಗಳೂರಿನಲ್ಲಿ ಸೈಟ್ ಕೊಡಿಸುವ ಹಾಗೂ ಮಾರಾಟ ಮಾಡುವ ಕೆಲಸ ಮಾಡುತ್ತಿದ್ದ ಕಾರಣ ಪರಿಚಯವಿರುತ್ತಾರೆ. ಆರೋಪಿ ಗೆಂಡೇಹಳ್ಳಿಯಲ್ಲಿ ಜಮೀನು ಕೊಡಿಸುವುದಾಗಿ ಹೇಳಿದ್ದರು.

ಆರೋಪಿ ತೋರಿಸಿದ ಜಾಗ ಹಾಸನದ ಬೇಲೂರು ತಾಲ್ಲೂಕಿನ ಗೆಂಡೇಹಳ್ಳಿಯಲ್ಲಿದ್ದು, ಸೈಟು ಮತ್ತು ಜಮೀನು ಕೂಡ ಆಗುತ್ತದೆ. ಆೆರೊಪಿ ಎಷ್ಟು ಸೈಟು ಹಾಗೂ ಜಮೀನನ್ನು ಮಾರಾಟ ಮತ್ತು ಕೊಡಿಸುವ ವ್ಯವಹಾರ ಮಾಡುವ ವ್ಯವಹಾರ ಮಾಡಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಆರೋಪಿಗೆ ಸರೇದ ರಿಯಲ್ ಎಸ್ಟೇಟ್ ಕಚೇರಿ ಎಲ್ಲಿ ಇತ್ತು ಎಂ ಬಗ್ಗೆ ನನಗೆ ಮಾಹಿತಿ ಇಲ್ಲ.ಆರೋಪಿ ಯಾರ ಮುಖಾಂತರ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಗಂಡೇಹಳ್ಳಿಯಲ್ಲಿ ಆರೋಪಿ ತೋರಿಸಲಾದ ಸೈಟು, ಜಮೀನು ಹಾಗೂ ತೋಟ ಯಾರಿಗೆ ಸೇರಿದ್ದು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಸದರಿ ಸೈಟು, ಜಮೀನು ಹಾಗೂ ತೋಟ ಯಾರಿಗೆ ಸೇರಿದ್ದು ಎಂದು ವೈಯಕ್ತಿಕವಾಗಿ ಕೇಳಿದುಕೊಂಡಿಲ್ಲ. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಕರಾರು ಆಗುವುದಿಲ್ಲ. ಸೈಟು, ಜಮೀನು ಹಾಗೂ ತೋಟ ತೋರಿಸಿದ್ದನ್ನು ಹೊರತುಪಡಿಸಿ, ಆರೋಪಿಯೊಂದಿಗೆ ಬೇರೆ ಯಾವುದೇ ವ್ಯವಹಾರ ಸಂಬಂಧ ಇರುವುದಿಲ್ಲ ಎಂದರೆ ಸರಿ. ಈ ಪ್ರಕರಣದಲ್ಲಿ ಹೇಳಲಾದ ವ್ಯವಹಾರವನ್ನು ಹೊರತುಪಡಿಸಿ, ಈ ಹಿಂದೆ ನನ್ನ ಮತ್ತು ಆರೋಪಿಯ ನಡುವೆ ಯಾವುದೇ ವ್ಯವಹಾರ ಆಗಿಲ್ಲ ಎಂದರೆ ಸರಿ. ಆರೋಪಿ ನನಗೆ ಜಾಗ ತೋರಿಸುವ ಮುನ್ನ ಆರೋಪಿಯ ಬಗ್ಗೆ ನನಗೆ ಮಾಹಿತಿ ಇತ್ತು.

KACM030026582022

C.C.1713/2022 P.W-1

ಆರೋಪಿಯ ಜೊತೆ ಬ್ರೋಕರ್ ಇದ್ದು, ಅವರ ಹೆಸರು ನನಗೆ ಗೊತ್ತಿಲ್ಲ. ಆರೋಪಿ ಚಿಕ್ಕಮಗಳೂರು ಜಿಲ್ಲೆ ಹಾಗೂ ತಾಲ್ಲೂಕಿನವರಲ್ಲ ಎಂದರೆ ಸರಿ. ನನಗೆ 4 ಎಕರೆ ಕಾಫಿ ಮತ್ತು ಮೆಣಸು ತೋಟ ಇರುತ್ತದೆ. ನಾನು ರಿಯಲ್ ಎಸ್ಟೇಟ್ ಕೆಲಸ ಮಾಡುವುದಿಲ್ಲ. ನಾನು ಬಿ.ಪಿ.ಎಲ್ ಕಾರ್ಡ್ ಹೊಂದಿರುತ್ತೇನೆ ಎಂದರೆ ಎ.ಪಿ.ಎಲ್ ಕಾರ್ಡ್ ಹೊಂದಿರುತ್ತೇನೆ. ನನ್ನ ಎ.ಪಿ.ಎಲ್ ಕಾರ್ಡ್ ನ್ನು ಹಾಜರುಪಡಿಸುತ್ತೇನೆ. ನನ್ನ ಜಮೀನಿನ ಮೇಲೆ ಈಗಲೂ ಕೂಡ ಸಾಲ ಇದೆ ಎಂದರೆ ಸರಿ. ನಾನು ಆದಾಯ ತೆರಿಗೆ ಪಾವತಿ ಮಾಡುವುದಿಲ್ಲ. ನನ್ನ ವ್ಯವಹಾರಗಳನ್ನು ಬ್ಯಾಂಕ್ ಮುಖಾಂತರ ಮಾಡುತ್ತೇನೆ ಎಂದರೆ ಸರಿಯಲ್ಲ. ನನ್ನ ಅಕೌಂಟ್ ಸ್ಟೇಟ್ ಮೆಂಟ್ ನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಹಣ ನೀಡುವ ಸಮಯದಲ್ಲಿ ಆರೋಪಿಯ ಆದಾಯದ ಮೂಲ ಏನು ಎಂದು ತಿಳಿದುಕೊಂಡಿದ್ದೀರಾ ಎಂದರೆ ಆರೋಪಿ ನನ್ನ ಹೆಸರಿಗೆ ಜಮೀನಿನ ಕರಾರು ಪತ್ರ ಮಾಡಿಕೊಡುವುದಾಗಿ ತಿಳಿಸಿರುತ್ತಾರೆ. ಆರೋಪಿಯ ಆದಾಯದ ಮೂಲ ಏನು ಎಂದು ನಾನು ಕೇಳಿ ತಿಳಿದುಕೊಂಡಿದ್ದೀರಾ ಎಂದರೆ ತಿಳಿದುಕೊಂಡಿರುತ್ತೇನೆ.

**ಮುಂದುವರಿದ ಪಾಟೀ ಸವಾಲು : ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಗಿದೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ ಹೇ ಕೇ ಸ ಇ ಎ,

sd/-
(ಶ್ರೀ ಹರೀಶ್.ಜಿ)
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಪ್ರ ದ ನ್ಯಾ ದಂ ., ಚಿಕ್ಕಮಗಳೂರು